ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂ. ಕಾಮತ್ತುಸು(7)/236/2015-16

ಡೈರೆಕ್ಟರ್ ಜನರಲ್ ಮತ್ತು
ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಕಛೇರಿ,
ಕರ್ನಾಟಕ ರಾಜ್ಯ, ಬೆಂಗಳೂರು
ದಿನಾಂಕ: 24-05-2017.

## ಸುತ್ತೋಲೆ

ವಿಷಯ:- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ನಿಯಮಗಳು, 1995ರಡಿಯಲ್ಲಿ ದಾಖಲಾದ ಪ್ರಕರಣಗಳ ತನಿಖೆ ನಡೆಸುವ ಕುರಿತು.

ಉಲ್ಲೇಖ:-
1. ಈ ಕಛೇರಿ ಸುತ್ತೋಲೆ ಸಂಖ್ಯೆ:ಎಲ್&ಓ/ಲಾ-1/21/2014, ದಿನಾಂಕ: 09/10/2014.
2. ಹೆಚ್ಚುವರಿ ಪೊಲೀಸ್ ಮಹಾನಿರೀಕ್ಷಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ:ಸಿಆರ್‌ಎಂ/140/ಡಿಸಿಆರ್‌ಇ/2001, ದಿನಾಂಕ: 15.10.2001.
3. ಈ ಕಛೇರಿ ಸುತ್ತೋಲೆ ಸಂಖ್ಯೆ: ಕಾಮತ್ತುಸು(7)/127/2016-17, ದಿನಾಂಕ: 03.03.2017.

*****

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ನಿಯಮಗಳು 1995ರ ನಿಯಮ 7(3)ರಂ Scheduled Castes and Scheduled Tribes (Prevention of Atrocities) Act,1989ರಡಿಯ ದಾಖಲಾದ ಪ್ರಕರಣಗಳಲ್ಲಿ ತನಿಖಾಧಿಕಾರಿಗಳು 30 ದಿನಗಳೊಳಗಾಗಿ ತಪ್ಪದೇ ತನಿಖೆಯನ್ನು ಪೂರ್ಣಗೊಳಿಸಬೇ ಹಾಗೂ 60 ದಿನಗಳ ಒಳಗಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಬೇಕೆಂದು ಸ್ಪಷ್ಟವಾಗಿ ಸಮಂ ನಿಗದಿಗೊಳಿಸಲಾಗಿದೆ. ಆದಾಗ್ಯೂ ಹೆಚ್ಚಿನ ಪ್ರಕರಣಗಳಲ್ಲಿ ತನಿಖಾಧಿಕಾರಿಗಳು ನಿಗದಿತ ಅವಧಿಯೊಳಗೆ ತನಿ ಪೂರ್ಣಗೊಳಿಸದೇ ಇರುವುದು ಘಟಕಾಧಿಕಾರಿಗಳು ಸಲ್ಲಿಸಿದ ಅಂಕಿ-ಅಂಶಗಳಿಂದ ತಿಳಿದು ಬರುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ನಿಯಮಗಳು 1995ರ ಕಲಂ 7(3)ರಂ Scheduled Castes and Scheduled Tribes (Prevention of Atrocities) Act,1989ರಡಿಯಲ್ ಪ್ರಕರಣಗಳಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಲು ತನಿಖಾಧಿಕಾರಿಗಳು ಸಕಾಲದಲ್ಲಿ ಮಾಹಿತಿಯನ್ನು ಸಂಗ್ರಹಿಸುವ ನಿಟ್ಟಿನಲ್ಲಿ CrPCರ ಕಲಂ 91 ಮತ್ತು IPCರ ಕಲಂ 175ರಲ್ಲಿರುವ ಅಧಿಕಾರವನ್ನು ಚಲಾಯಿಸಬೇಕು ತನಿಖಾಧಿಕಾರಿಗಳು ಅಧಿಕಾರವನ್ನು ಚಲಾಯಿಸದೆ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ವಹಿಸಿದಲ್ಲಿ, ಅಂತಹ ತನಿಖಾಧಿಕಾರಿ ರವರ ವಿರುದ್ಧ Scheduled Castes and Scheduled Tribes (Prevention of Atrocities Act,1989ರ ಕಲಂ 4ರಡಿಯಲ್ಲಿ ಕ್ರಮ ತೆಗೆದುಕೊಳ್ಳುವುದು.

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂ. ಕಾಮತುಸು(7)/236/2015-16

ಡೈರೆಕ್ಟರ್ ಜನರಲ್ ಮತ್ತು
ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಕಛೇರಿ,
ಕರ್ನಾಟಕ ರಾಜ್ಯ, ಬೆಂಗಳೂರು
ದಿನಾಂಕ:27-06-2017.

## ಸುತ್ತೋಲೆ

ವಿಷಯ:- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯಡಿ ದಾಖಲಾದ ಪ್ರಕರಣಗಳ ಕುರಿತು.

*****

ಎಸ್.ಸಿ/ಎಸ್.ಟಿ. ದೌರ್ಜನ್ಯ ಕಾಯ್ದೆಯಡಿ ಮೇ 2017ರಲ್ಲಿ ದಾಖಲಾದ ಪ್ರಕರಣಗಳನ್ನು ಹಾಗೂ ಹಿರಿಯ ಅಧಿಕಾರಿಗಳು ಪ್ರಕರಣದ ಸ್ಥಳದ ಭೇಟಿಯ ಮತ್ತು ಸದರಿ ಪ್ರಕರಣಗಳ ತನಿಖೆಯಲ್ಲಿ ವ್ಯಯ ಮಾಡಿದ ಸಮಯದ ಬಗ್ಗೆ ಎಲ್ಲಾ ಘಟಕಾಧಿಕಾರಿಗಳು ಕಳುಹಿಸಿದ ಮಾಹಿತಿಯನ್ನು ಪರಿಶೀಲಿಸಲಾಯಿತು. ಮೇ, 2017ರ ಮಾಹೆಯಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ 1989ರಡಿಯಲ್ಲಿ ದಾಖಲಾದ ಪ್ರಕರಣಗಳ ಅಂಕಿ-ಅಂಶಗಳ ವಿವರಗಳನ್ನು ವಿಶ್ಲೇಷಣೆ ಮಾಡಲಾಗಿ, ಇದರಲ್ಲಿ ಘಟಕಾಧಿಕಾರಿಗಳು ಬಹಳಷ್ಟು ಪ್ರಕರಣಗಳಲ್ಲಿ ಘಟನೆ ನಡೆದ ದಿನದಂದು ಸ್ಥಳ ವೀಕ್ಷಣೆ/ಪರಿಶೀಲನೆ ಮಾಡದಿರುವುದು ಹಾಗೂ ತನಿಖಾಧಿಕಾರಿಗಳು ಪ್ರಕರಣದ ತನಿಖೆಯಲ್ಲಿ ಹೆಚ್ಚು ಸಮಯ ತೊಡಗಿಸಿಕೊಳ್ಳದೇ ಇರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಇದರಿಂದ ಎಸ್.ಸಿ/ಎಸ್.ಟಿ. ದೌರ್ಜನ್ಯ ಪ್ರಕರಣಗಳನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲವೆಂದು ತಿಳಿದುಬರುತ್ತದೆ.

ಆದ್ದರಿಂದ ಘಟಕಾಧಿಕಾರಿಗಳು, ತನಿಖಾಧಿಕಾರಿಗಳು ಮತ್ತು ಮೇಲ್ವಿಚಾರಣಾ ಅಧಿಕಾರಿಗಳಾದ ಅಡಿಷನಲ್ ಎಸ್.ಪಿ./ಡಿ.ಸಿ.ಪಿ.ರವರುಗಳು ಎಸ್.ಸಿ./ಎಸ್.ಟಿ. ಪ್ರಕರಣ ದಾಖಲಾದ ತಕ್ಷಣವೇ ಅಥವಾ ಬಾತ್ಮೀದಾರರಿಂದ / ಬೀಟ್ ಪೊಲೀಸರಿಂದ / ಎನ್.ಜಿ.ಓ ಹಾಗೂ ಇತರೆ ಯಾವುದೇ ಮೂಲಗಳಿಂದ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಮೇಲೆ ದೌರ್ಜನ್ಯ ನಡೆದ ವಿಷಯ ತಿಳಿದ **"ತಕ್ಷಣವೇ"** ಘಟನೆ ನಡೆದ ಸ್ಥಳಕ್ಕೆ ಕಡ್ಡಾಯವಾಗಿ ಭೇಟಿ ನೀಡುವುದು ಹಾಗೂ ಯಾವುದೇ ಕಾರಣದಿಂದ ವಿಳಂಬಕ್ಕೆ ಆಸ್ಪದ ನೀಡಲೇಬಾರದು. ಘಟಕಾಧಿಕಾರಿಗಳು/ಮೇಲ್ವಿಚಾರಣಾ ಅಧಿಕಾರಿಗಳು ತನಿಖಾಧಿಕಾರಿಗಳಿಗೆ ಸದರಿ ಕಾಯ್ದೆಯ ನಿಯಮಗಳಂತೆ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳುವಂತೆ ಸೂಚನೆಗಳನ್ನು ನೀಡುವುದು ಹಾಗೂ ದೌರ್ಜನ್ಯಕ್ಕೊಳಗಾದ ಸಂತ್ರಸ್ಥರಿಗೆ ಧೈರ್ಯ ತುಂಬುವುದಲ್ಲದೇ, ನಿಗದಿತ ಅವಧಿಯಲ್ಲಿ ತನಿಖೆ ಪೂರ್ಣಗೊಳಿಸಲು ಮತ್ತು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವುದು. ಸರ್ಕಾರಿ ಆದೇಶದಂತೆ ಸಲ್ಲಬೇಕಾದ ಪರಿಹಾರ ಮಂಜೂರಾತಿಗಾಗಿ ಸಂಬಂಧಪಟ್ಟ ಇಲಾಖೆಗೆ ವರದಿ ಸಲ್ಲಿಸುವುದು.

(ರೂಪಕ್ ಕುಮಾರ್ ದತ್ತಾ, ಐ.ಪಿ.ಎಸ್.) 27/6/17
ಡೈರೆಕ್ಟರ್ ಜನರಲ್ ಮತ್ತು
ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್,
ಕರ್ನಾಟಕ ರಾಜ್ಯ, ಬೆಂಗಳೂರು.

ಇವರಿಗೆ,

1. ಪೊಲೀಸ್ ಕಮೀಷನರ್‌ರವರುಗಳು, ಬೆಂಗಳೂರು ನಗರ, ಮೈಸೂರು ನಗರ, ಹುಬ್ಬಳ್ಳಿ-ಧಾರವಾಡ ನಗರ, ಮಂಗಳೂರು ನಗರ ಮತ್ತು ಬೆಳಗಾವಿ ನಗರ.
2. ಎಲ್ಲಾ ವಲಯಗಳ ಪೊಲೀಸ್ ಮಹಾನಿರೀಕ್ಷಕರುಗಳಿಗೆ.
3. ಎಲ್ಲಾ ಜಿಲ್ಲೆಗಳ ಪೊಲೀಸ್ ಅಧೀಕ್ಷಕರುಗಳಿಗೆ (ಕೆ.ಜಿ.ಎಫ್. ಮತ್ತು ರೈಲ್ವೇಸ್ ಸೇರಿದಂತೆ)

**ಪ್ರತಿಯನ್ನು ಮಾಹಿತಿಗಾಗಿ:-**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಿ.ಸಿ.ಎ.ಎಸ್.) ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.
2. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು.

ಕರ್ನಾಟಕ ಸರ್ಕಾರ
(ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ)

ಸಂಖ್ಯೆ:ಡಿಪಿಎನ್/ಎಸ್.ಸಿ.ಎಸ್.ಟಿ./1/2017.18

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ
ನಿರ್ದೇಶಕರ ಕಛೇರಿ,
ಹೆಚ್. ಬಿ. ಕಾಂಪ್ಲೆಕ್ಸ್, 6ನೇ ಮಹಡಿ
ಕಾವೇರಿ ಭವನ, ಕೆಂಪೇಗೌಡ ರಸ್ತೆ,
ಬೆಂಗಳೂರು – 560 009.
ದಿನಾಂಕ: 23.06.2017.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪಿ.ಸಿ.ಎ.ಎಸ್)
ಒಳಾಡಳಿತ ಇಲಾಖೆ,
ವಿಧಾನ ಸೌದ, ಬೆಂಗಳೂರು.

ಮಾನ್ಯರೇ.

ವಿಷಯ: ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿಯ ಸಭೆಯ ನಡವಳಿಯ ಅನುಪಾಲನಾ ವರದಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: 1. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಪತ್ರ ಸಂಖ್ಯೆ: ಸಕನಿ/ಸಿಎಸ್-1/ಸಿಆರ್-3/ರಾಜಾಸ/2017.18 ದಿನಾಂಕ: 08.06.2017.
2. ಸರ್ಕಾರದ ಪತ್ರ ಸಂಖ್ಯೆ: ಒಇ 31 ಪಿಸಿಆರ್ 2017 ದಿನಾಂಕ: 23.06.2017.

*****

ಮೇಲ್ಕಂಡ ವಿಷಯದ ಕುರಿತು, ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 25.04.2017 ರಂದು ನಡೆದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ(ದೌರ್ಜನ್ಯ ತಡೆ) ಕಾಯ್ದೆ 1989 ಮತ್ತು ನಿಯಮಗಳು 1995 ರಡಿ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯ ನಡವಳಿ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಿ ಅನುಪಾಲನಾ ವರದಿಯನ್ನು ಸಲ್ಲಿಸಲು ಕೋರಲಾಗಿದೆ. ಅದರಂತೆ, ನಡವಳಿಯಲ್ಲಿ ನಮೂದಿಸಿದ ಈ ಇಲಾಖೆಗೆ ಸಂಬಂಧಿಸಿದ ವಿಷಯಗಳ ಕುರಿತು ಅನುಪಾಲನಾ ವರದಿಯನ್ನು ಈ ಕೆಳಕಂಡಂತೆ ನಿವೇದಿಸಿಕೊಳ್ಳಲಾಗಿದೆ.

1. <u>ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆಯಾಗುತ್ತಿರುವ ಬಗ್ಗೆ.</u>

ದೌರ್ಜನ್ಯ ಪ್ರಕರಣಗಳ ಇತ್ಯರ್ಥಕ್ಕಾಗಿ ವಿಶೇಷ ನ್ಯಾಯಾಲಯಗಳು ರಚನೆಯಾಗಿದ್ದಾಗ್ಯೂ ಸಹ, ಈ ನ್ಯಾಯಾಲಯಗಳಿಗೆ ಭಾರತ ದಂಡ ಸಂಹಿತೆ ಪ್ರಕರಣಗಳನ್ನೂ ಸಹ ವರ್ಗಾಯಿಸಿರುವುದರಿಂದ, ವಿಶೇಷ ಪ್ರಕರಣಗಳಿಗೆ ಸಮಯಾವಕಾಶವು ಸಾಕಾಗದೇ ಇರುವ ಕಾರಣ ಅನಗತ್ಯ ವಿಳಂಬ ಉಂಟಾಗುವುದರಿಂದ ಸಾಕ್ಷಿಗಳು ಪ್ರಕರಣದ ಬಗ್ಗೆ ಆಸಕ್ತಿಯನ್ನು ಕಳೆದುಕೊಂಡು ಪ್ರಕರಣವನ್ನು ಬೆಂಬಲಿಸಿ ಸಾಕ್ಷಿ ಹೇಳುವ ಉತ್ಸಾಹವನ್ನೂ ಸಹ

ಕಳೆದುಕೊಳ್ಳುವ ಕಾರಣ ಶಿಕ್ಷೆಯ ಪ್ರಮಾಣ ಕಡಿಮೆ ಆಗುತ್ತಿರುತ್ತದೆ. ಅಲ್ಲದೆ ಸಾಕ್ಷಿಗಳು, ಪಿರ್ಯಾದಿ ಹಾಗೂ ನೊಂದ ವ್ಯಕ್ತಿಗಳು ನ್ಯಾಯಾಲಯದ ಹೊರಗೆ ಆರೋಪಿಗಳ ಜೊತೆಗೆ ರಾಜೀ ಆಗಿ ನ್ಯಾಯಾಲಯದಲ್ಲಿ ಪ್ರತಿಕೂಲ ಸಾಕ್ಷಿ ಹೇಳುತ್ತಿರುವುದರಿಂದ ಬಹಳಷ್ಟು ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆಯಾಗುತ್ತದೆ.

2. <u>ದೌರ್ಜನ್ಯ ಪ್ರಕರಣಗಳ ಇತ್ಯರ್ಥವು ನಿಧಾನಗತಿಯಲ್ಲಿ ಆಗುತ್ತಿರುವ ಬಗ್ಗೆ ಕಾರಣ.</u>

ದೌರ್ಜನ್ಯ ಪ್ರಕರಣಗಳ ಇತ್ಯರ್ಥಕ್ಕಾಗಿ ವಿಶೇಷ ನ್ಯಾಯಾಲಯಗಳು ರಚನೆಯಾಗಿದ್ದಾಗ್ಯೂ ಸಹ, ಈ ನ್ಯಾಯಾಲಯಗಳಿಗೆ ಭಾರತ ದಂಡ ಸಂಹಿತೆ ಪ್ರಕರಣಗಳನ್ನೂ ಸಹ ವರ್ಗಾಯಿಸಿರುವುದರಿಂದ, ವಿಶೇಷ ಪ್ರಕರಣಗಳಿಗೆ ಸಮಯಾವಕಾಶವು ಸಾಕಾಗದೇ ಇರುವ ಕಾರಣ ಅನಗತ್ಯ ವಿಳಂಬ ಉಂಟಾಗುತ್ತದೆ.

3. <u>ದೋಷ ಮುಕ್ತ (Acquit) ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸಿರುವ ಪ್ರಕರಣಗಳ ವಿವರ.</u>

ದೌರ್ಜನ್ಯ ಪ್ರಕರಣಗಳು ನ್ಯಾಯಾಲಯದಲ್ಲಿ ಬಿಡುಗಡೆಯಾದಾಗ ಸದರಿ ಪ್ರಕರಣಗಳ ತೀರ್ಪುಗಳನ್ನು ಪರಾಮರ್ಶಿಸಿ, ಮೇಲ್ಮನವಿ ಸಲ್ಲಿಸುವ ಪ್ರಕರಣಗಳಲ್ಲಿ ಈ ಕಛೇರಿಯಿಂದ ಅಭಿಪ್ರಾಯ ನೀಡಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. 2014-2015-2016ರ ವರ್ಷಗಳಲ್ಲಿ ಈ ಕಛೇರಿಯಿಂದ ಮೇಲ್ಮನವಿ ಸಲ್ಲಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾದ ಪ್ರಕರಣಗಳ ವಿವರಗಳನ್ನು ಪ್ರತ್ಯೇಕ ಪಟ್ಟಿ ಮಾಡಿ ಅವಗಾಹನೆಗಾಗಿ ಈ ಪತ್ರದೊಂದಿಗೆ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

(ಕೆ.ರುದ್ರಸ್ವಾಮಿ)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು (ಪ್ರ),
ಬೆಂಗಳೂರು.

ಪ್ರತಿಯನ್ನು: ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.